**ದಿನಾಂಕ 29.11.2022 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಕೆ.ಯು. ವಕೀಲರಿಂದಃ**

1. ನಾನು 9 ನೇ ತರಗತಿಯವರೆಗೂ ಉರ್ದು ಭಾಷೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ ಆದರೆ ಮಾತನಾಡಲು ಬರುತ್ತದೆ ಮತ್ತು ಅರ್ಥ ಮಾಡಿಕೊಳ್ಳುತ್ತೇನೆ. ವಾದಿ ನಸೀಂಕಮಲ್ ನನಗೆ ಸಂಬಂಧಿಕರಲ್ಲ ಆದರೆ 2012 ನೇ ಸಾಲಿನಿಂದಲೂ ಪರಿಚಯವಿದ್ದಾರೆ. 2012-13 ರಲ್ಲಿ ಸಿ.ಬಿ. ಅಗ್ರಹಾರ, ಶಿರಾ ದಲ್ಲಿ ದಾವಾ ಜಮೀನಿನ ಪಕ್ಕದಲ್ಲಿ ನನಗೆ ಸಂಬಂಧಪಟ್ಟ ಜಮೀನು ಇದ್ದು, ವಾದಿಯ ಯಜಮಾನರಿಗೆ ನಾನು ಮಾರಾಟ ಮಾಡಿದ್ದು, ಅಲ್ಲಿಂದ ಅವರು ನನಗೆ ಪರಿಚಯವಿದ್ದಾರೆ.
2. ಸದರಿ ಜಮೀನಿನ ಸರ್ವೆ ನಂ.45/3 ಆಗಿದ್ದು, 7 ಎಕರೆ ವಿಸ್ತೀರ್ಣ ಇತ್ತು. ದಾವಾ ಜಮೀನು ಈಗ ಖಾಲಿ ಇದೆ. ದಾವಾ ಜಮೀನಿನ ಅಕ್ಕ ಪಕ್ಕದ ಜಮೀನುಗಳ ಸರ್ವೆ ನಂಬರ್ ಮತ್ತು ವಿಸ್ತೀಶಣ ಹೇಳಲು ಸಾಧ್ಯವಿಲ್ಲ. ಏನೆಲ್ಲಾ ಬೆಳೆಗಳು ಇವೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ಸದರಿ ಜಮೀನುಗಳ ಮಾಲೀಕರ ಹೆಸರುಗಳು ನನಗೆ ಗೊತ್ತಿಲ್ಲ. ದಾವಾ ಸರ್ವೆ ನಂಬರ್ 45 ಅದರಲ್ಲಿ ಎಷ್ಟು ಪೋಡುಗಳಾಗಿವೆ ನನಗೆ ಗೊತ್ತಿಲ್ಲ. ಸರ್ವೆ ನಂ. 45/1 ರ ಚಕ್ಕು ಬಂದಿ, ಪೂರ್ವಕ್ಕೆ ಕೋಡಿಮಲ್ಲಯ್ಯ ಮತ್ತು ಪದ್ಮಾಂಬ ಮತ್ತು ಗಿರೀಶ ರವರ ಜಮೀನು, ಪಶ್ಚಿಮಕ್ಕೆ ಕದುರಯ್ಯ ಮತ್ತು ಕಣ್ಣಣ್ಣನವರ ಜಮೀನು, ಉತ್ತರಕ್ಕೆ ಭೀಮಣ್ಣ ಮತ್ತು ಧರ್ಮಯ್ಯನವರ ಜಮೀನು ಮತ್ತು ದಕ್ಷಿಣಕ್ಕೆ ಪದ್ಮಾಂಬ ಮತ್ತು ಗಿರೀಶ ರವರ ಜಮೀನು ಇದೆ.
3. ಕೋಡಿಮಲ್ಲಯ್ಯನವರನ್ನು ನಾನು ನೋಡಿದ್ದೇನೆ. ದಾವಾ ಜಮೀನಿನ ಪೂರ್ವಕ್ಕೆ ಇರುವ ಕೋಡಿಮಲ್ಲಯ್ಯನವರ ಜಮೀನಿನ ಚಕ್ಕು ಬಂದಿ, ಸರ್ವೆ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಜಮೀನಿನ ದಕ್ಷಿಣಕ್ಕೆ ಇರುವ ಪದ್ಮಾಂಬ ಮತ್ತು ಗಿರೀಶ ರವರ ಜಮೀನಿನ ಚಕ್ಕು ಬಂದಿ, ಸರ್ವೆ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ, ಆದರೆ ಅದು ಖಾಲಿ ಜಮೀನು ಆಗಿದೆ. ದಾವಾ ಜಮೀನಿನ ಪಶ್ಚಿಮಕ್ಕೆ ಇರುವ ಕದುರಯ್ಯನ ಜಮೀನಿನ ಚಕ್ಕು ಬಂದಿ, ಸರ್ವೆ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಜಮೀನಿನ ಉತ್ತರಕ್ಕೆ ಭೀಮಣ್ಣ ಮತ್ತು ಧರ್ಮಯ್ಯನವರ ಜಮೀನಚಕ್ಕು ಬಂದಿ, ಸರ್ವೆ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ.

4. ವಾದಿ ನಸೀಂಕಮಲ್ ರವರು ಆರೋಗ್ಯವಾಗಿ ಚೆನ್ನಾಗಿ ಇದ್ದಾರೆ ಎಂದರೆ ಸರಿ. ಅವರಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿಯು ಅವರಿಗೆ ದೂರದಿಂದ ಬರಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ವಾದಿ ಮತ್ತು ಅವರ ಯಜಮಾನರು ಇಬ್ಬರೂ ಪರಿಚಯವಿದ್ದಾರೆ. ವಾದಿಯ ಯಜಮಾನರು ಕಮಲ್ ಪಾಷ ರವರು ಆರೋಗ್ಯವಾಗಿ ಚೆನ್ನಾಗಿ ಇದ್ದಾರೆ ಎಂದರೆ ಸರಿ. ವಾದಿಯ ಯಜಮಾನರಿಗೂ ಸಹ ಸಾಕ್ಷಿ ಹೇಳಲು ಯಾವುದೇ ಸಮಸ್ಯೆ ಇಲ್ಲ ಎಂದರೆ ಸಾಕ್ಷಿಯು ಅವರಿಗೆ ಅಲ್ಲಿಂದ ಬಂದು ಸಾಕ್ಷಿ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

5. ವಾದಿಯವರ ಮನೆಯ ವ್ಯವಹಾರಗಳು ನನಗೆ ಗೊತ್ತಿಲ್ಲ. ವಾದಿ ಮತ್ತು ಅವರ ಯಜಮಾನರಿಗೆ ಎಷ್ಟು ಜನ ಮಕ್ಕಳಿದ್ದಾರೆ ಎಂದು ನಾನು ಕೇಳಿಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನಡೆದಿರುವ ವ್ಯವಹಾರ ಎಲ್ಲಿ ಯಾವಾಗ ನಡೆಯಿತು ಎಂದರೆ ಸಾಕ್ಷಿಯು ಅಗ್ರಿಮೆಂಟ್ ಆಗಿದೆ ಸದರಿ ಅಗ್ರಿಮೆಂಟ್ ಅವರ ಜಮೀನಿನಲ್ಲೇ ನಡೆದಿದೆ. ಜಮೀನಿನ ಕ್ರಯದ ಅಗ್ರಿಮೆಂಟ್ ಆಗುವ ಸಮಯದಲ್ಲಿ ಕ್ರಯ ಪತ್ರ ಮತ್ತು ಪಹಣಿಯನ್ನು ನೋಡಿರುತ್ತೇವೆ. ವ್ಯವಹಾರ ಆಗುವ ಸಮಯದಲ್ಲಿ ನಾನು, ವಾದಿ, ವಾದಿಯ ಯಜಮಾನರು, ಕೋಡಿಮಲ್ಲಯ್ಯ ಮತ್ತು ಅವರ ಮಕ್ಕಳು ಇದ್ದರು. ಸುಮಾರು 4-5 ಜನ ಇದ್ದರು. ಕೋಡಿಮಲ್ಲಯ್ಯನವರ 2-3 ಮಕ್ಕಳೂ ಸಹ ಇದ್ದರು. ಸದರಿಯವರ ಹೆಸರುಗಳು ನನಗೆ ಗೊತ್ತಿಲ್ಲ.

6. ನಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದೇನೆ. ಕೋಡಿಮಲ್ಲಯ್ಯನವರಿಗೆ ಎಷ್ಟು ಜನ ಮಕ್ಕಳು ಎಂದು ನಾನು ವಿಚಾರಿಸಿಲ್ಲ, ಯಾಕೆಂದರೆ ಅದು ಅವರ ಸ್ವಯಾರ್ಜಿತ ಸ್ವತ್ತು ಆಗಿದ್ದು ಅದೇ ರೀತಿ ವಾದಿ ಮತ್ತು ಅವರ ಮಕ್ಕಳ ಬಗ್ಗೆಯೂ ಸಹ ವಿಚಾರಿಸಿಲ್ಲ.

ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**